**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆ:- 199/2025**

| | | |
|---|---|---|
| **ಸಾಕ್ಷಿದಾರನ ಹೆಸರು** | : ಮಂಜುನಾಥ ಎಂ.ಎನ್ | ಪಿ.ಡಬ್ಲ್ಯೂ:-10 |
| **ತಂದೆಯ ಹೆಸರು** | : ವಿ್ಸಿ ನಾಗರಾಜು | ಸಿ.ಡಬ್ಲ್ಯೂ:-4 |
| **ವಯಸ್ಸು** | : 51 ವರ್ಷ | |
| **ಉದ್ಯೋಗ** | : ಕ್ಯಾಷಿಯರ್, ರಾಜಲಕ್ಷ್ಮೀ ಸ್ಪಿರಿಟ್ | |
| **ವಾಸಸ್ಥಳ** | : ಸಾತಗಳ್ಳಿ, ಮೈಸೂರು. | |

**ಸಾಕ್ಷಿಯನ್ನು ಈ ದಿನ ದಿ:07.03.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಅಭಿಯೋಜಕರಿಂದ:-**

1. ನಾನು ಮೇಲೆ ಹೇಳಿದ ವಿಳಾಸದಲ್ಲಿ ಹಲವು ವರ್ಷಗಳಿಂದ ವಾಸವಿರುತ್ತೇನೆ.

2. ನಾನು ರಾಜಲಕ್ಷ್ಮಿ ಸ್ಪಿರಿಟ್ಸ್ ವೈನ್ ಶಾಪ್ ನಲ್ಲಿ 2020 ರಿಂದ ಕ್ಯಾಷಿಯರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾವು ಮಧ್ಯವನ್ನು ಮಾರಾಟ ಮಾಡುತ್ತೇವೆ. ನಮ್ಮ ಅಂಗಡಿಗೆ ಒಂದು 5 ಸಿಸಿ ಟಿವಿ ಕ್ಯಾಮಾರಗಳನ್ನು ಅಳವಡಿಸಿದ್ದು, ಅದರಲ್ಲಿ 4 ಕ್ಯಾಮಾರಗಳು ಅಂಗಡಿಯ ಒಳಗಡೆ ಅಳವಡಿಸಿದ್ದು, 1 ಹೊರಗಡೆ ಅಳವಡಿಸಲಾಗಿದೆ. ದಿ.14.12.2022 ರಂದು ಮಂಡಿ ಪೊಲೀಸ್ ಠಾಣೆ ಯ ಪೊಲೀಸರು ಬೆಳಗ್ಗೆ 11.00-11.30 ರ ಸಮಯಕ್ಕೆ ಬಂದು, ನಮ್ಮ ಅಂಗಡಿಯಲ್ಲಿ ಅಳವಡಿಸಿದ ಸಿಸಿ ಟಿವಿ ಕ್ಯಾಮಾರಗಳನ್ನು ಪರಿಶೀಲಿಸಿ ಅದರಲ್ಲಿ ಹಿಂದಿನ ದಿನ ರಾತ್ರಿ 07.00-.07.30 ಕ್ಕೆ ಕೆಲವು ಆಸಾಮಿಗಳು ಮಧ್ಯವನ್ನು ಖರೀದಿ ಮಾಡಿದ ಬಗ್ಗೆ ಸಿಸಿ ಟಿವಿ ಕ್ಯಾಮಾರದಲ್ಲಿ ತೋರಿಸಿ ಈ ವ್ಯಕ್ತಿಗಳು ಬಂದು ಮಧ್ಯ ಖರೀದಿಸಿರುತ್ತಾರೆಯೇ ಎಂದು ವಿಚಾರಿಸಿ, ನನಗೆ ಗುರುತಿಸಲು ಕೇಳಿದಾಗ ನಾನು ಅವರು ಹಿಂದಿನ ದಿನ ರಾತ್ರಿ ಮಧ್ಯ

ಖರೀದಿಸಿದ್ದರು ಎಂದು ತಿಳಿಸಿರುತ್ತೇನೆ. ಇಬ್ಬರು ಅಂಗಡಿಯ ಒಳಗಡೆ ಮದ್ಯವನ್ನು ಖರೀದಿಸಿ, ಒಬ್ಬ ಆಸಾಮಿ ಹೊರಗಡೆ ಆಟೋ ಮುಂದೆ ನಿಂತಿದ್ದು, ಸದರಿ ಎಲ್ಲಾ ದೃಶ್ಯಗಳು ಸಿಸಿ ಟಿವಿಯಲ್ಲಿ ಸೆರೆಯಾಗಿದ್ದವು. ಸದರಿ ಆಸಾಮಿಗಳು ಮದ್ಯದ 90 **ML** ನ 3 ಟೆಟ್ರಾ ಪ್ಯಾಕ್ ಗಳನ್ನು ಖರೀದಿಸಿದ್ದರು. ಪೊಲೀಸರು ನನಗೆ ಸದರಿ ಆಸಾಮಿಗಳು ಅಂಗಡಿಯಿಂದ ಮದ್ಯ ಖರೀದಿ ಮಾಡಿ ಮುಂದೆ ಹೋಗಿ ಗಲಾಟೆ ಮಾಡಿಕೊಂಡು ಒಬ್ಬ ವ್ಯಕ್ತಿಗೆ ಮಾರಾಣಾಂತಿಕವಾಗಿ ಹಲ್ಲೆ ಮಾಡಿರುತ್ತಾರೆ ಎಂದು ತಿಳಿಸಿ, ಸದರಿ ಸಿಸಿ ಟಿವಿ ದೃಶ್ಯಾವಳಿಗಳ ಬಗ್ಗೆ ಪರಿಶೀಲಿಸಿರುತ್ತಾರೆ.

**3.** ನಂತರ ಒಂದು ವಾರದ ಬಳಿಕ ಮಂಡಿ ಪೊಲೀಸರು ಒಬ್ಬ **Technician** ಅನ್ನು ಕರೆದುಕೊಂಡು ಬಂದು ಅಂಗಡಿಯ ಸಿಸಿ ಟಿವಿ ಕ್ಯಾಮಾರದಲ್ಲಿ ಸೆರೆಯಾದ ದೃಶ್ಯಾವಳಿಗಳನ್ನು **pendrive** ನಲ್ಲಿ ಪಡೆದುಕೊಂಡಿರುತ್ತಾರೆ. ಸದರಿ **pendrive** ಮತ್ತು **CC TV** ದೃಶ್ಯಾವಳಿಗಳನ್ನು ನೋಡಿದರೆ ಗುರುತಿಸಬಲ್ಲೆ. ನ್ಯಾಯಾಲಯದ ಮುಂದೆ ಬಿಳಿ ಬಟ್ಟೆಯಲ್ಲಿ ಸುತ್ತಿ ಸುಸ್ಥಿತಿಯಲ್ಲಿದ್ದ ವಸ್ತುಗಳನ್ನು, ನ್ಯಾಯಾಲಯದ ಅನುಮತಿ ಮೇರೆಗೆ ತೆಗೆದು ನೋಡಲಾಗಿ ಅದರಲ್ಲಿ ಒಂದು **Pendrive** ಇತ್ತು. ಸದರಿ **Pendrive** ನ್ನು ನ್ಯಾಯಾಲಯದ ಕಂಪ್ಯೂಟರ್ ವಿಭಾಗದಿಂದ ಲ್ಯಾಪ್ ಟಾಪ್ ತರಿಸಿ ತೆರೆದ ನ್ಯಾಯಾಲಯದಲ್ಲಿ ಚಲಾಯಿಸಲಾಯಿತು. ಸಾಕ್ಷಿಯೂ ಸಿಸಿ ಟಿವಿ ದೃಶ್ಯಾವಳಿಗಳನ್ನು ನೋಡಿ ಗುರುತಿಸಿದ್ದು, ಸದರಿ **Pen drive** ನ್ನು ನಿಪಿ.6 ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತಾರೆ. ಸದರಿ ವ್ಯಕ್ತಿಗಳನ್ನು ಬಹಳ ವರ್ಷಗಳ ಹಿಂದೆ ನೋಡಿದ್ದು, ಗುರುತಿಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

**<u>ಪಾಟೀ ಸವಾಲುಃ 3 ನೇ ಆರೋಪಿ ಪರ ವಕೀಲರಿಂದಃ–</u>**

**4.** ಸಾಕ್ಷಿಗೆ ನ್ಯಾಯಾಲಯದ ವಿಸಿ ಟಿವಿಯಲ್ಲಿ ಕಾರಾಗೃಹದಿಂದ ಹಾಜರುಪಡಿಸಿದ 3 ನೇ ಆರೋಪಿಯನ್ನು ತೋರಿಸಲಾಯಿತು. ಸದರಿ ವ್ಯಕ್ತಿಯನ್ನು ಈ ಹಿಂದೆ ಯಾವತ್ತಾದರೂ ನೋಡಿರುತ್ತೀರಿಯೇ? ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಆರೋಪಿ ಪರ ವಕೀಲರು ಎಸ್.ಸಿ ಸಂಖ್ಯೆ:– **246/2023** ರಲ್ಲಿಯ 1 ಮತ್ತು 2 ನೇ ಆರೋಪಿ ಪರ ವಕೀಲರ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುತ್ತೇನೆ ಎಂದು ನುಡಿಯುತ್ತಾರೆ.

ಮರುವಿಚಾರಣೆ:– ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಮೈಸೂರು.**